ಖಾಸಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ

೭೧೪. ಶ್ರೀ ವೇದಾಂತ ಹೆಬ್ಬಾಗಿಲು (ಕೃಷ್ಣರಾಜ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಖಾಸಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲು ಕಳೆದ ಮೂರು ವರ್ಷಗಳಿಂದ ಅನುಮತಿ ನೀಡಲಾಗಿದೆ ?

ಆ) ಪ್ರತಿಯೊಂದು ಕಾಲೇಜಿಗೂ ಆಡಳಿತ ಮಂಡಳಿಗೆ ಹಾಗೂ ಸರ್ಕಾರಕ್ಕೆ ನಿಗದಿ ಪಡಿಸಿರುವ ಸೀಟುಗಳ ಸಂಖ್ಯೆ ಎಷ್ಟು ?

ಇ) ಆಡಳಿತ ಮಂಡಳಿಯು ತನ್ನ ಸೀಟುಗಳಿಗೆ ಪ್ರವೇಶ ಕೊಡಲು ಸರ್ಕಾರ ನಿಗದಿ ಮಾಡಿರುವ ವಂತಿಗೆ ಹಣವೆಷ್ಟು ?

ಈ) ವಂತಿಗೆ ಹಣ ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ನೀತಿ-ನಿಯಮಗಳನ್ನು ರೂಪಿಸಿದೆಯೇ?

ಉ) ಹಾಗಿದ್ದಲ್ಲಿ, ಅದರ ರೂಪರೇಖೆಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮಂಜೂರು ಮಾಡಲಾದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ.

ಅ) ೧೯೮೫-೮೬	೧೯೮೬-೮೭	೧೯೮೭-೮೮
ಇಲ್ಲ	೬	ಇಲ್ಲ

೧೯೮೬-೮೭ನೇ ಸಾಲಿನಲ್ಲಿ ಮಂಜೂರು ಮಾಡಿದ ೬ ಕಾಲೇಜುಗಳ ಹೆಸರುಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಕ್ಕೆ ಹಾಗೂ ಆಡಳಿತ ಮಂಡಳಿಗೆ ನಿಗದಿ ಪಡಿಸಿದ ಸೀಟುಗಳ ಸಂಖ್ಯೆಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಇ) (೧) ೧೯೮೫-೮೬ನೇ ಸಾಲಿನಲ್ಲಿ ಅನುದಾನ ಪಡೆಯುತ್ತಿರುವ ಕಾಲೇಜುಗಳಲ್ಲಿ ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ರೂ. ೬,೦೦೦-೦೦ ಮತ್ತು ಬೇರೆ ರಾಜ್ಯದವರಿಗೆ ರೂ. ೧೨,೦೦೦-೦೦ ಗಳ ಶುಲ್ಕ ಪಡೆಯಲು ಸರ್ಕಾರದ ಅನುಮತಿ ಕೊಟ್ಟಿದೆ.

೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಈ ಕಾಲೇಜುಗಳಲ್ಲಿ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ರೂ. ೧೦,೦೦೦-೦೦ ಮತ್ತು ಬೇರೆ ರಾಜ್ಯದವರಿಗೆ ರೂ. ೨೫,೦೦೦-೦೦ ಗಳ ಶುಲ್ಕ ಪಡೆಯಲು ಸರ್ಕಾರವು ಅನುಮತಿ ಕೊಟ್ಟಿದೆ.

(೨) ಖಾಸಗಿ ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ಮೂರು ವರ್ಷಗಳಲ್ಲಿ ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪಿನಂತೆ ಆಡಳಿತ ಮಂಡಳಿ ಕೋಟಾ ಸೀಟುಗಳಿಗೆ, ಸಂದರ್ಭೋಚಿತವಾಗಿ ಅಪರೂ ಎಷ್ಟು ಹಣ ಬೇಕಾದರೂ ಪಡೆಯಲು ಅವಕಾಶವಿರುತ್ತದೆ.

ಈ) ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಷನ್ ಫೀ ರದ್ದತಿ) ಕಾಯ್ದೆ ೧೯೮೪ನ್ನು ಸರ್ಕಾರ ಜಾರಿಗೆ ತಂದಿದೆ. ಈ ಕಾಯ್ದೆಯನ್ವಯ ೧೧-೭-೧೯೮೫ರಿಂದ ೫ ವರ್ಷಗಳವರೆಗೆ ಮಾತ್ರ ಸರ್ಕಾರದ ಅನುಮೋದನೆಯಂತೆ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡಲು ಅವಕಾಶವಿದೆ. ಅನುದಾನ ಪಡೆಯುತ್ತಿರುವ ಇಂಜಿನಿಯರಿಂಗ್ ಕಾಲೇಜುಗಳಿಗೆ ಮಾತ್ರ, ಇಷ್ಟೇ ಹಣ ತೆಗೆದುಕೊಳ್ಳಬೇಕೆಂದು ಸರ್ಕಾರ ನಿಗದಿ ಪಡಿಸಿದೆ. ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಉಚ್ಚ ನ್ಯಾಯಾಲಯದ ಆದೇಶದಂತೆ ಶೇ. ೪೦ ಸ್ಥಾನಗಳನ್ನು ಸರ್ಕಾರ ತುಂಬುತ್ತಿದ್ದು, ನ್ಯಾಯಾಲಯದ ಆದೇಶದಂತೆ ಉಳಿದ ಶೇ. ೬೦ ರಷ್ಟು ಸೀಟುಗಳಿಗೆ ಆಡಳಿತ ಮಂಡಳಿ ಎಷ್ಟು ಹಣ ಬೇಕಾದರೂ ತೆಗೆದುಕೊಳ್ಳಬಹುದಾಗಿದೆ.

ರಾಜ್ಯದಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿ ಡೊನೇಷನ್ ಅಥವಾ ಕ್ಯಾಪಿಟೇಷನ್ ಶುಲ್ಕವನ್ನು ರದು ಪಡಿಸಬೇಕೆಂಬುದೇ ಸರ್ಕಾರದ ನೀತಿ ನಿಯಮವಾಗಿದೆ. ಅದರಂತೆಯೇ ೧೯೮೪ರ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಪ್ರೈಮರಿ ಶಾಲೆಯಿಂದ ಹಿಡಿದು ಕಾಲೇಜಿನವರೆಗೆ ೧೯೮೪ರ ಕಾಯಿದೆಯನ್ವಯ ಇಂತಿಷ್ಟೇ ಬೋಧನಾ ಶುಲ್ಕವನ್ನು ತೆಗೆದುಕೊಳ್ಳಬೇಕೆಂದು ಆದೇಶಿಸಲಾಗಿದ್ದು, ಈ ಆದೇಶಗಳನ್ನು ಆಡಳಿತ ವಂಡಳಿಗಳವರು ಉಚ್ಚ ನಾಯಾಲಯದಲ್ಲಿ ಪ್ರಶ್ನಿಸಿ ತಡೆಯಾಜ್ಞೆಗಳನ್ನು ತಂದಿದ್ದಾರೆ.

ಉ) ಮೇಲೆ 'ಈ' ಹೇಳಿರುವುದಲ್ಲದೆ, ಅನೇಕ ಮೇಲ್ಮನವಿಗಳು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥವಾಗಬೇಕಾಗಿದೆ. ೧೩-೭-೧೯೮೮ ರಿಂದ ೧೯೮೪ನೇ ಕಾಯ್ದೆಯನ್ವಯ ವಿದ್ಯಾ ಸಂಸ್ಥೆಗಳಲ್ಲಿ ಕ್ಯಾಪಿಟೇಷನ್ ಶುಲ್ಕ ತೆಗೆದುಕೊಳ್ಳಲು ಅವಕಾಶವಿಲ್ಲ.

ಅನುಬಂಧ

೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಿಗದಿಪಡಿಸಿರುವ ಸರ್ಕಾರದ ಮತ್ತು ಆಡಳಿತ ಸೀಟುಗಳ ಸಂಖ್ಯೆ.

ಕ್ರಮ ಸಂಖ್ಯೆ	ಇಂಜಿನಿಯರಿಂಗ್ ಕಾಲೇಜಿನ ಹೆಸರು	೧೯೮೫-೮೬		೧೯೮೬-೮೭		೧೯೮೭-೮೮	
		ಸರ್ಕಾರ	ಆಡಳಿತ	ಸರ್ಕಾರ	ಆಡಳಿತ	ಸರ್ಕಾರ	ಆಡಳಿತ
	ಅ) ಸರ್ಕಾರದ ಕಾಲೇಜುಗಳು						
೧	ಯು.ವಿ.ಸಿ.ಇ. ಬೆಂಗಳೂರು	೪೩೦	...	೪೩೦	...	೪೩೦	...
೨	ಎಸ್.ಕೆ.ಎಸ್.ಜೆ.ಟಿ., ಬೆಂಗಳೂರು	೪೦	...	೪೦	...	೪೦	...
೩	ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ	೨೯೦	...	೨೯೦	...	೨೯೦	...
೪	ಕೆ.ಆರ್.ಇ.ಸಿ., ಸೂರತ್‌ಕಲ್	೨೨೦ (ಶೇ. ೫೦ ಸೀಟುಗಳನ್ನು ಕೇಂದ್ರ ಸರ್ಕಾರ ತುಂಬಿಸುತ್ತದೆ.)	...	೩೯೦	...	೩೯೦	...
೫	ಯು.ವಿ.ಸಿ.ಇ. ಸಂಜೆ ಕಾಲೇಜು, ಬೆಂಗಳೂರು	೪೨	...	೪೨	...	೪೨	...
	ಆ) ಅನುದಾನಿತ ಕಾಲೇಜುಗಳು						
೧	ಬಿ.ಎಂ.ಎಸ್. ಕಾಲೇಜು, ಬೆಂಗಳೂರು	೩೧೨	೨೨೩	೩೨೯	೨೪೧	೩೪೫	೨೯೦
೨	ಎನ್.ಐ.ಇ., ಮೈಸೂರು	೧೯೦	೯೦	೨೧೧	೧೦೯	೨೪೩	೧೧೭
೩	ಜೆ.ಸಿ.ಇ., ಮೈಸೂರು	೨೮೩	೧೦೨	೩೩೧	೧೧೪	೩೭೨	೯೪
೪	ಪಿ.ಇ.ಎಸ್. ಕಾಲೇಜು, ಮಂಡ್ಯ	೨೧೪	೯೬	೨೩೬	೧೦೯	೨೧೪	೯೬

೧	೨	೩	೪	೫	೬	೭	೮
೫	ವಂಲ್ಹಾಡ್ ಕಾಲೇಜು, ಹಾಸನ	೨೨೫	೧೯೦	೨೬೧	೨೦೪	೨೬೩	೨೧೨
೬	ಬಿ.ವಿ.ಬಿ. ಕಾಲೇಜು, ಹುಬ್ಬಳ್ಳಿ	೨೧೮	೧೭೨	೨೫೫	೨೨೦	೩೪೨	೨೦೮
೭	ಬಸವೇಶ್ವರ ಕಾಲೇಜು, ಬಾಗಲಕೋಟೆ	೨೨೬	೧೧೪	೨೪೦	೧೩೦	೨೨೬	೧೧೪
೮	ಹೆಚ್.ಕೆ.ಇ. ಸೊಸೈಟಿ ಪಿ ಡಿ. ಅಪ್ಪ ಕಾಲೇಜು, ಗುಲ್ಬರ್ಗಾ	೨೩೬	೧೮೪	೨೩೬	೧೮೪	೨೬೨	೨೩೮
೯	ಬಿ ಎಂ.ಎಸ್. ಸಂಜೆ ಕಾಲೇಜು, ಬೆಂಗಳೂರು	೧೫೩	೩೬	೧೫೩	೩೬	೧೬೧	೩೮
೧೦	ಎಸ್.ಐ.ಇ. ಸಂಜೆ ಕಾಲೇಜು, ಮೈಸೂರು	೩೬	೮	೩೬	೮	೩೭	೮
೧೧	ಜೆ. ಸಿ. ಇ. ಸಂಜೆ ಕಾಲೇಜು, ಮೈಸೂರು	೬೮	೧೬	೬೮	೧೬	೬೨	೧೬
	೫) ಖಾಸಗಿ ಅನುದಾನರಹಿತ ಕಾಲೇಜುಗಳು						
೧	ಆರ್.ವಿ. ಕಾಲೇಜು, ಬೆಂಗಳೂರು	೨೦೮	೩೧೨	೨೧೪	೩೨೧	೨೨೦	೩೩೦
೨	ಎಂ.ಎಸ್. ರಾಮಯ್ಯ ಕಾಲೇಜು, ಬೆಂಗಳೂರು	೨೨೬	೩೩೯	೩೬೬	೨೦೯	೨೫೮	೩೮೭
೩	ಅ) ಸಿದ್ಧಗಂಗಾ ಕಾಲೇಜು, ತುಮಕೂರು	೧೯೮	೨೯೭	೨೦೮	೩೧೨	೨೪೦	೩೬೦
	ಆ) ಸಿದ್ಧಗಂಗಾ ಕಾಲೇಜು, ತುಮಕೂರು (ಡಿಪ್ಲೊಮೋ ದವರಿಗಾಗಿ	೩೬	೫೪	೩೬	೫೪	೩೬	೫೪
೪	ದಯಾನಂದ ಸಾಗರ ಕಾಲೇಜು, ಬೆಂಗಳೂರು	೧೯೭	೨೮೮	೨೧೧	೨೯೪	೨೨೦	೩೩೦
೫	ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	೧೫೪	೨೩೧	೧೬೦	೨೪೦	೧೯೪	೨೯೧

೬	ಇಸ್ಲಾಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	...	೨೯೦	...	೨೯೦	...	೨೯೦
೭	ಸಿದ್ಧಾರ್ಥ ಇಂಜಿನಿಯರಿಂಗ್ ಕಾಲೇಜು, ತುಮಕೂರು	೧೧೬	೧೭೪	೧೩೮	೨೨೭	೧೨೮	೧೯೨
೮	ಡಾ॥ ಅಂಬೇಡ್ಕರ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	೧೨೦	೧೭೦	೧೩೮	೧೯೭	೧೫೨	೨೨೮
೯	ಎಂ.ವಿ.ಜೆ. ಕಾಲೇಜು, ವೈಟ್‌ಫೀಲ್ಡ್	...	೨೬೦	...	೩೯೦	...	೩೮೦
೧೦	ಬಾಪೂಜಿ ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ	೧೪೦	೨೧೦	೧೬೦	೨೪೦	೧೬೪	೨೪೬
೧೧	ಜವಹರಲಾಲ್ ಇಂಜಿನಿಯರಿಂಗ್ ಕಾಲೇಜು, ಶಿವಮೊಗ್ಗ	೬೦	೯೦	೮೦	೧೨೦	೮೦	೧೨೦
೧೨	ಆದಿಚುಂಚನಗಿರಿ ಇಂಜಿನಿಯರಿಂಗ್ ಕಾಲೇಜು, ಚಿಕ್ಕಮಗಳೂರು	೮೪	೧೨೬	೧೧೨	೧೬೮	೯೬	೧೪೪
೧೩	ಶ್ರೀ ಜಗದ್ಗುರು ಮುರುಘ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಚಿತ್ರದುರ್ಗ	೧೩೨	೧೯೮	೧೫೨	೨೧೮	೧೨೮	೧೯೨
೧೪	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇಂಜಿನಿಯರಿಂಗ್ ಕಾಲೇಜು, ಧಾರವಾಡ	೧೫	೨೧೫	೧೫	೨೬೦	...	೩೧೦
೧೫	ಕೆ. ಎಲ್. ಇ. ಇಂಜಿನಿಯರಿಂಗ್ ಕಾಲೇಜು, ಬೆಳಗಾಂ	೬೧	೯೦	೮೪	೧೨೬	೮೪	೧೨೬
೧೬	ಕೆ. ಎಲ್. ಎಸ್. ಗೋಗಟೆ ಇಂಜಿನಿಯರಿಂಗ್ ಕಾಲೇಜು, ಬೆಳಗಾಂ	೧೧೧	೧೫೯	೧೨೩	೧೭೭	೧೩೪	೧೮೬
೧೭	ಅಂಜುಮಾನ್ ಕಾಲೇಜು, ಭಟ್ಕಳ್	...	೧೨೦	...	೧೬೦	...	೧೬೦
೧೮	ಬಿ.ಎಲ್.ಡಿ.ಎಸ್. ಕಾಲೇಜು, ಬಿಜಾಪುರ	೯೭	೧೩೮	೧೩೧	೧೭೪	೧೧೮	೧೭೭
೧೯	ರೂರಲ್ ಟೆಕ್ನಿಕಲ್ ಕಾಲೇಜು, ಹಂಲಕೋಟೆ	೮೬	೧೨೯	೧೧೦	೧೬೫	೧೧೦	೧೬೫

೧	೨	೩	೪	೫	೬	೭	೮
೨೦	ಎಸ್.ಟಿ.ಜೆ ಕಾಲೇಜು ರಾಣೆಬೆನ್ನೂರು	೬೦	೯೦	೭೨	೧೦೮	೭೨	೧೮೮
೨೧	ಹೆಚ್.ಕೆ.ಇ. ಸೊಸೈಟಿ ಕಾಲೇಜು ರಾಯಚೂರು	೭೨	೧೦೮	೭೨	೧೦೮	೭೨	೧೦೮
೨೨	ವಿಜಯನಗರ ಕಾಲೇಜು, ಬಳ್ಳಾರಿ	೬೪	೯೬	೧೦೦	೧೫೦	೮೮	೧೩೨
೨೩	ಗುರುನಾನಕ್ ದೇವ್ ಕಾಲೇಜು, ಬೀದರ್	...	೨೨೦	...	೨೮೦	...	೩೧೦
೨೪	ರೂರಲ್ ಇಂಜಿನಿಯರಿಂಗ್ ಕಾಲೇಜು, ಭಾಲ್ಕಿ	೬೬	೯೯	೭೮	೧೧೭	೬೬	೯೯
೨೫	ವಾಣಿಪಾಲ್ ಇಂಜಿನಿಯರಿಂಗ್ ಕಾಲೇಜು, ಮಾಣಿಪಾಲ್	...	೪೨೦	...	೫೨೦	...	೫೫೦
೨೬	ಖಾಜಾ ಭಂದೇ ನವಾಜ್ ಕಾಲೇಜು, ಗುಲ್ಬರ್ಗಾ	..	೨೦೦	...	೨೦೦	...	೨೦೦
೨೭	ಗೌಸಿಯಾ ಇಂಜಿನಿಯರಿಂಗ್ ಕಾಲೇಜು, ರಾಮನಗರ	...	೧೬೦	...	೨೦೦	...	೨೪೦
	೧೯೮೬-೮೭ ರಲ್ಲಿ ಮಂಜೂರು ಮಾಡಿದ ಖಾಸಗಿ ಕಾಲೇಜುಗಳು						
೨೮	ಗೋಲ್ಡನ್ ವ್ಯಾಲಿ ವಿದ್ಯಾಸಂಸ್ಥೆ, ಕೆ. ಜಿ. ಎಫ್.	...	...	೪೮	೭೨	೪೮	೭೨
೨೯	ಸರ್ ಎಂ. ವಿಶ್ವೇಶ್ವರಯ್ಯ ಕಾಲೇಜು, ಬೆಂಗಳೂರು	...	...	೪೮	೭೨	೮೪	೧೨೬
೩೦	ಕಲ್ಪತರು ಕಾಲೇಜು, ತಿಪಟೂರು	...	...	೪೮	೭೨	೪೮	೭೨
೩೧	ಆದಿಚುಂಚನಗಿರಿ ಕಾಲೇಜು, ಚಿಕ್ಕಬಳ್ಳಾಪುರ	...	...	೬೪	೯೬	೬೪	೯೬
೩೨	ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್ ಸಂಸ್ಥೆ, ಇಂಜಿನಿಯರಿಂಗ್ ಕಾಲೇಜು, ಸಂಕ್ಯ, ದಕ್ಷಿಣ ಕನ್ನಡ	...	...	೪೮	೭೨	೪೮	೭೨
೩೩	ನಿಟ್ಟೆ ವಿದ್ಯಾಸಂಸ್ಥೆ, ಇಂಜಿನಿಯರಿಂಗ್ ಕಾಲೇಜು, ನಿಟ್ಟೆ	...	...	೪೮	೭೨	೧೪೪	೨೧೬